**ಕರ್ನಾಟಕ ಸರ್ಕಾರ**

ಸಂಖ್ಯೆ:ಲೋಇ 46 ಬಿಟಿಐ 2003

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು,ದಿನಾಂಕ:20/08/2007

**ಸುತ್ತೋಲೆ**

**ವಿಷಯ:** ಲೋಕೋಪಯೋಗಿ ಇಲಾಖೆಯ ನಿರೀಕ್ಷಣ/ಪ್ರವಾಸಿ ಮಂದಿರಗಳ ನಿರ್ವಹಣೆ ಬಗ್ಗೆ.

***

ಲೋಕೋಪಯೋಗಿ ಇಲಾಖೆಯ ನಿರೀಕ್ಷಣ/ಪ್ರವಾಸಿ ಮಂದಿರಗಳು ರಾಜ್ಯದ ಹಲವಾರು ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳಿಗೆ ಹಾಗೂ ಮಾನ್ಯ ಸಂಸದರು/ಶಾಸಕರಿಗೆ ತಮ್ಮ ಪ್ರವಾಸದಲ್ಲಿ ಅನುಕೂಲ ಮಾಡಿಕೊಡುತ್ತವೆ. ಈ ನಿರೀಕ್ಷಣ/ಪ್ರವಾಸಿ ಮಂದಿರಗಳು ಸರ್ಕಾರದ ಸ್ಥಿತಿಗತಿಯನ್ನೂ ಸಹ ಪ್ರತಿಬಿಂಬಿಸುತ್ತವಾದ್ದರಿಂದ ಇವುಗಳನ್ನು ಸಮರ್ಪಕವಾಗಿ ನಿರ್ವಹಿಸುವ ಅಗತ್ಯವಿದ್ದು ಅದಕ್ಕಾಗಿ ಈ ಕೆಳಗೆ ವಿವರಿಸಿದ ಮಾರ್ಗದರ್ಶನವನ್ನು ನೀಡಲಾಗಿದೆ;

1. ನಿರೀಕ್ಷಣ/ಪ್ರವಾಸಿ ಮಂದಿರಗಳ ಪರಿಸರವನ್ನು ಶುಚಿಯಾಗಿ ಇಡತಕ್ಕದ್ದು.
2. ಕಟ್ಟಡಗಳಿಗೆ ಕಾಲಕಾಲಕ್ಕೆ ಸುಣ್ಣ-ಬಣ್ಣ ಹಚ್ಚಿಸತಕ್ಕದ್ದು.
3. ಸ್ನಾನಗೃಹದ ಎಲ್ಲಾ ಕೊಳಾಯಿ ಹಾಗೂ ಶೋವರ್ ಹೆಡ್ (shower Head)ಗಳನ್ನು ಸುಸ್ಥಿತಿಯಲ್ಲಿ ಇಡತಕ್ಕದ್ದು.
4. ಓವರ್‌ಹೆಡ್ ಟ್ಯಾಂಕ್ ಹಾಗೂ ಸಂಪ್ ಟ್ಯಾಂಕ್‌ಗಳನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಸ್ವಚ್ಛ ಮಾಡತಕ್ಕದ್ದು.
5. ಕುಡಿಯುವ ನೀರಿಗಾಗಿ ಅಕ್ವಾಗಾರ್ಡ್ ಅಳವಡಿಸಿ, ಅದರ ಸೂಕ್ತ ನಿರ್ವಹಣೆ ನೋಡಿಕೊಳ್ಳತಕ್ಕದ್ದು.
6. ರಾಜ್ಯದ ರಸ್ತೆಗಳ ನಕಾಶೆ (Road Map)ಯ ಇತ್ತೀಚಿನ (Latest)ಪ್ರತಿ (ಕನ್ನಡ ಮತ್ತು ಆಂಗ್ಲಭಾಷೆಯಲ್ಲಿ) ಯನ್ನು ಫ್ರೇಂ ಮಾಡಿ ಹಾಕತಕ್ಕದ್ದು.
7. ರಾಜ್ಯದ ಪ್ರವಾಸಿ ತಾಣಗಳ/ಕಟ್ಟಡಗಳ ಫೋಟೋಗಳನ್ನು ಫ್ರೇಂ ಮಾಡಿ ಹಾಕತಕ್ಕದ್ದು.
8. ತಾಲ್ಲೂಕು ಹಾಗೂ ಜಿಲ್ಲೆಗೆ ಸಂಬಂಧಪಟ್ಟ ಮುಖ್ಯವಾದ ಅಂಕಿ-ಅಂಶಗಳು ಹಾಗೂ ಐತಿಹಾಸಿಕ ವಿವರಗಳನ್ನು ಪ್ರದರ್ಶಿಸತಕ್ಕದ್ದು.

(ಸುಧೀರ್ ಕೃಷ್ಣ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಲೋಕೋಪಯೋಗಿ ಇಲಾಖೆ

**ಗೆ:**

1) ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ವೃತ್ತ, ಬೆಂಗಳೂರು-560 001.
2) ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ), ಸರ್.ಎಂ.ವಿಶ್ವೇಶ್ವರಯ್ಯ ಮಾರ್ಗ, ಧಾರವಾಡ-580 008.
3) ಎಲ್ಲಾ ಅಧೀಕ್ಷಕ/ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ
4) ಹೆಚ್ಚುವರಿ ಪ್ರತಿಗಳು.